**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 9777/2021 ಸಿ.ಡಬ್ಲೂ.10 ಪಿ.ಡಬ್ಲೂ.13

| | |
|---|---|
| ಹೆಸರು | ಡಾ. ಸುಧಿಂದ್ರ |
| ತಂದೆ | ಪ್ರಭಾಕರಾವ |
| ವಯಸ್ಸು | 55 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ಯುನೈಟೆಡ್ ಆಸ್ಪತ್ರೆ ಕಲಬುರಗಿ |
| ವಾಸಸ್ಥಳ | ಕಲಬುರಗಿ |

ದಿನಾಂಕ 24-01-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು 2011 ರಿಂದ ಇಲ್ಲಿಯವರೆಗೆ ಯುನೈಟೆಡ್ ಆಸ್ಪತ್ರೆ ಕಲಬುರಗಿಯಲ್ಲಿ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ.

ಚಾಸಾ 1 ರವರು ದಿಃ 14-08-2021 ರಂದು ಹಲ್ಲೆಯ ಹಿನ್ನಲೆ ಮೇಲೆ ಆಸ್ಪತ್ರೆಗೆ ಬಂದಿದ್ದರು. ಸದರಿ ಅವರನ್ನು ಪರೀಕ್ಷಿಸಿ ನೋಡಿದಾಗ ಅವರ ಮಧ್ಯದ ಬೆರಳು ಮತ್ತು ಉಂಗುರ ಬೆರಳಿನ ಮಧ್ಯದಲ್ಲಿ 4X4 c.m ಕತ್ತರಿಸಿದ ಗಾಯ ಆಗಿತ್ತು. ನನ್ನ ಪ್ರಕಾರ ಸದರಿ ಗಾಯವು ತೀವ್ರ ಸ್ವರೂಪದ ಗಾಯ ಆಗಿರುತ್ತದೆ.

ಸಾಕ್ಷಿಯು ನಿಪಿ. 4 ರಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರಃ ಎಸ್. ಡಿ. ಬಿ. ವಕೀಲರಿಂದ:**

ಚಾಸಾ 1 ರವರೊಂದಿಗೆ ಅವರ ಸಂಬಂದಿಕರಾದ ಶಂಕರವರು ಬಂದಿದ್ದರು. ಚಾಸಾ 1 ರವರು ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಮುಂಚೆ ಪ್ರಥಮ ಚಿಕಿತ್ಸೆಯನ್ನು ತೆಗೆದುಕೊಂಡು ಬಂದಿರಬಹುದು ಆದರೆ ಗಾಯಕ್ಕೆ ಹೊಲಿಗೆಗಳನ್ನು ನಾವೆ ಹಾಕಿರುತ್ತೇವೆ. ಸದರಿ ಚಾಸಾ 1 ರವರ ಗಾಯಕ್ಕೆ ಬ್ಯಾಂಡೇಜ ಕಟ್ಟಿದ ಬಗ್ಗೆ ನನಗೆ ನೆನಪು ಇಲ್ಲ, ಸಾಕ್ಷಿಯು ಮುಂದುವರೆದು ಸದರಿ ಗಾಯವು ಆಗತಾನೆ ಆದ ಗಾಯ ಅಂತಾ ನುಡಿಯುತ್ತಾರೆ. ಸದರಿ ಗಾಯವನ್ನು ಹೊರತುಪಡಿಸಿದ ಚಾಸಾ 1 ರವರಿಗೆ ಬೇರೆ ಗಾಯ ಆಗಿರಲಿಲ್ಲ. 4X4 c.m ಎಂದರೆ ಉದ್ದ ಮತ್ತು ಅಗಲ ಇರುತ್ತದೆ. ಸದರಿ ಗಾಯವು ಆಗತಾನೆ ಆದ ಕಾರಣ ಅದರ ಆಳವನ್ನು ನಮೂದಿಸಲು ಆಗುವುದಿಲ್ಲ ಅಂತಾ ನುಡಿಯುತ್ತಾರೆ. ನಾನು ನಿಪಿ. 4 ರಲ್ಲಿ ಸದರಿ ಗಾಯವು ಯಾವ ವಸ್ತುವಿನಿಂದ ಆಗಿರುತ್ತದೆ ಅಂತಾ ನಮೂದು ಮಾಡಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ದ್ವಿಚಕ್ರ ವಾಹನದ ಮೇಲೆ ಹೋಗುವಾಗ ವಾಹನದ ಮೇಲಿಂದ ಬಿದ್ದಾಗ ಚೂಪಾದ ವಸ್ತು ತಗುಲಿ ಮೇಲೆ ತಿಳಿಸಿದ ಗಾಯದ ತರಹ ಗಾಯ ಆಗಬಹುದು ಎಂದರೆ ಸರಿ. ನಾನು ಚಾಸಾ 1 ರವರಿಗೆ ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಮುಂಚೆ ಎಮಎಲಸಿ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಎಮಎಲಸಿ ದಾಖಲು ಮಾಡಿರುತ್ತೇನೆ. ನಾನು ನಿಪಿ. 4 ರ ಜೊತೆಗೆ ನಾನು ಎಮಎಲಸಿ ದಾಖಲಾದ ಬಗ್ಗೆ ದಾಖಲೆಯನ್ನು

ಸಲ್ಲಿಸಿರುವುದಿಲ್ಲ  ಮತ್ತು ನಿ.ಪಿ  4 ರಲ್ಲಿ ಎಮ‌ಎಲಸಿ ಬಗ್ಗೆ ನಮೂದು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸರಿಗೆ ತಿಳಿಸಿರುತ್ತೇವೆ ಅಂತಾ ನುಡಿಯುತ್ತಾರೆ.  ನಿಪಿ. 4 ರಲ್ಲಿ ಚಾಸಾ 1 ರವರ ಗುರುತಿನ ಚಿಹ್ನೆಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಗುರುತಿನ ಚಿಹ್ನೆಗಳು ಕಾಣಿಸಿಲ್ಲ ಅಂತಾ ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ನಿಪಿ. 4 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಚಾಸಾ 1 ರವರು ದಿಃ 14-08-2021 ರಂದು ಆಸ್ಪತ್ರೆಗೆ ಭೇಟಿ ಕೊಟ್ಟಿರುವುದಿಲ್ಲ, ನಾನು ಯಾವುದೇ ಚಿಕಿತ್ಸೆ ಮಾಡಿರುವುದಿಲ್ಲ, ಪೋಲಿಸರ ಮಾತುಕೇಳಿಕೊಂಡು ಈ ಪ್ರಕರಣಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ